12. ಈ ಕೆಳಗೆ ನಮೂದಾಗುವ ಗಾರ್ನಮೆಂಟ್ ಆರ್ಡರು ಓದಿ ರಿಕಾರ್ಡು ಮಾಡಲಾಯಿತು.

(1) ಪಶುವೈದ್ಯಶಾಲೆಗಳ ಬಾಬತು ಖರ್ಚನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಸಹಿಸತಕ್ಕದ್ದಾಗಿಯೂ ಮ್ಯುನಿಸಿಪಾಲಿಟಿಯೊಳಗೆ ಇರತಕ್ಕ ಅಂಥಾ ವೈದ್ಯಶಾಲೆಗಳ ಬಾಬತು ಖರ್ಚು ಬಗ್ಗೆ ಮುನಿಸಿಪಾಲಿಟಿಯಿಂದ $\frac{1}{3}$ ಭಾಗ ಖರ್ಚು ವೊಬಲಗನ್ನು ಕೊಡತಕ್ಕದ್ದಾಗಿ ನಮೂದಾಗುವ 5—4—09ನೆ ಮರ್ಕುಂ 9731-40—ಲೋ. ಬೋ. 455-07-35ನೆ ಗಾರ್ನಮೆಂಟ್ ಆರ್ಡರ್

(2) ದೊಡ್ಡಿಯಲ್ಲಿ ಕಟ್ಟಿಡಿದ ಜಾನುವಾರುಗಳಿಗೆ ಚಾರಾ ಖರ್ಚು ದರವನ್ನು ನಿರಖು ಮಾಡುವ ವಿಚಾರದಲ್ಲಿ ತಲಪಿದ 19—5—09ನೆ ಮರ್ಕುಂ 11568-75—ಲೋ. ಬೋ. 377-08ನೆ ಗಾರ್ನಮೆಂಟ್ ಆರ್ಡರು.

13. ವೈಸಿಡೆಂಟರವರಿಂದ ಮಂಜೂರಾದ ಈ ಕೆಳಗೆ ನಮೂದಾಗುವ ಅಂದಾಜಾಗಳನ್ನು ಬೋರ್ಡಿನಲ್ಲಿ ಓದಿ ಒಪ್ಪಲಾಯಿತು.

(1) ರಾಮನಹಳ್ಳಿಯಲ್ಲಿ ಹಂಗಾಮಿ ಭಾವಿ ತೆಗಿಯಲು 10 ರೂಪಾಯಿಗೆ ಮಂಜೂರಾದ ಅಂದಾಜಾ.

(2) ಅಜ್ಜಂಪುರದ ಟ್ರಾವಲರ್ಸ್ ಬಂಗ್ಲೆ ಕಾಂಪೌಂಡಿನಲ್ಲಿನ ಭಾವಿ ಆಳಪಡಿಸಲು 47 ರೂಪಾಯಿನ ಅಂದಾಜಾ.

(3) ರಾಮನಹಳ್ಳಿಯಲ್ಲಿ ಹೊಲೆಯರಿಗೆ ಭಾವಿ ಕಟ್ಟಲು 158 ರೂಪಾಯಿನ ಅಂದಾಜಾ.

(4) ಮುಗಳವಳ್ಳಿ ಭಾವಿ ಆಳಪಡಿಸಲು 20 ರೂಪಾಯಿನ ಅಂದಾಜಾ.

14. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮಿಟಿಂಗ್ 1909ನೆ ಆಗಸ್ಟ್ 12 ತಾರೀಖು ಗುರುವಾರ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸ್ಯಯ್ಯಂಗಾರ್,
ಪ್ರೆಸಿಡೆಂಟ್.

ಮೈಸೂರು ಗವರ್ನಮೆಂಟ್ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರವರ ಆಫೀಸ್.

ನೋಟಿಫಿಕೇಷನ್ ನಂಬರ್ 106—C. S. 14, ಬೊಕ್ಕಾಂ ಬೆಂಗಳೂರು.

ತಾರೀಖು 14-15ನೆ ಜುಲೈ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟಿವ್ ಸೊಸೈಟಿಯು, 1905ನೆ ಇಸವಿಯ ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತೆ:—

ಹೆಸರು	ಸ್ಥಳ.	ರಿಜಿಸ್ಟರು ಆದ ತಾರೀಖು.
ಕಡಕೊಳದ ಶ್ರೀ ಸೋಮೇಶ್ವರ ಸಹಾಯ ಸಂಘ ಲಿಮಿಟೆಡ್.	ಕಡಕೊಳ-ಮೈಸೂರು ತಾಲ್ಲೂಕು.	12ನೆ ಜುಲೈ 1909ನೆ ಇಸವಿ.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ರ 1908—09ನೆ ಇಸವಿ ಮಿ॥ ಅರ್ಜಿ ನಂಬರ್ 831.

ಅರ್ಜೀದಾರ್ ಕೋಲಾರ ತಾಲ್ಲೂಕು ತ್ಯಾಕಲ ಹೋಬಳಿ ನಿದರವಂಗಲ್ಲಿರುವ ಸೊಂಣಪ್ಪನ ಮಗ ಪಾಪಣ್ಣ, ಮೈನರಾದ 1ನೆ ಮುನಿಶಾಮಿ, 2ನೆ ಹನುಮ ಬೆಂಗಳೂರು ಸ್ಥಳದ ಮೈನರ್ ಮುನಿಶಾಮಿ ವಗೈರೇರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಮುನಿಶ್ಯಾಮಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಸೆದರೀ ವೆಂಕಟನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1909ನೆ ಇಸವಿ ಜುಲೈ ತಾರೀಖು 23ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ರ 1909ನೆ ಇಸವಿ ಜುಲೈ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1908—09ನೆ ಇಸವಿ ಮಿ॥ ನಂಬರು 948.

ಮಾಗಡಿ ವಗೈರೆ ಸ್ಥಳದಲ್ಲಿದ್ದು ಬಳ್ಳಾರಿಯಲ್ಲಿ ಮೃತಪಟ್ಟ ಬಿ. ತಿರುವೆಂಗಡ ವೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅಜೀದಾರು ಬೆಂಗಳೂರು ಕಲಾಕಿಪಾಳ್ಯದಲ್ಲಿರುವ ರಂಗಸ್ವಾಮಿ ವೊದಲಿಯಾರ್ರ ಮಗಳು ತಾಯಮ್ಮನಿಗೆ ಮುಖ್ಯ ವಾರಸ್ದಾರು ಆಗಬೇಕೆಂದು ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಬಿ. ತಿರುವೆಂಗಡ ವೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 271 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಾಯಮ್ಮನ ಅರ್ಜಿಯನ್ನು ಸ್ರ 1909ನೆ ಇಸವಿ ಜುಲ್ಯೆ 23ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯಲಿಕ್ಕೆ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುವೆಂಗಡಂ ವೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1909ನೆ ಇಸವಿ ಜುಲೈ 7ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1908—09ನೆ ಇಸವಿ ಮಿ॥ ನಂಬರ್ 965

ಬಂಗಳೂರು ತಾಲ್ಲೂಕು ಹೊರಮಾವು ಅಗರದಲ್ಲಿದ್ದು ಫವತಿಪಟ್ಟ ಶಂಕರರಡ್ಡಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸದರಿ ವೂರಿನಲ್ಲಿರುವ ಸಂಜೀವರಡ್ಡಿ ಹೆಂಡತಿ ಸಂಜೀವಮ್ಮನಿಗೆ ಮೃತಪಟ್ಟ ಶಂಕರರಡ್ಡಿಗೆ ಮುಖ್ಯ ವಾರಸ್ದಾರಳು ಆಗಬೇಕೆಂಬ ಹಕ್ಕು ದಾರಿ ಮೇಲೆ ಹೊರಮಾವು ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಶಂಕರರಡ್ಡಿ ಜಿಂದಗಿ ಬಗ್ಯಾಗಿ ಬರತಕ್ಕ 590 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಜೀವಮ್ಮನ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರರಡ್ಡಿ ಆಸ್ತಿಗೆ ಹಕ್ಕು ದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1908—09ನೆ ಇಸವಿ ಮಿ॥ ನಂಬರ್ 971.

ಬೆಂಗಳೂರು ಚಿಕ್ಕಮಾವಹಳ್ಳಿಲಿದ್ದು ಫವತಿಪಟ್ಟ ವೆಂಕಟಶಾಮಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಮಾವಹಳ್ಳಿಲಿರುವ 1ನೆ ಮುನಿಶಾಮಪ್ಪನ ಹೆಂಡತಿ ಮುನಿಹನುಮಕ್ಕ, 2ನೆ ಮುನಿಯಮ್ಮ 3ನೆ ರಾಮಸ್ವಾಮಪ್ಪ ವೈನರ್, ಗಾರ್ಡಿಯರ್ 1ನೆ ಮುನಿಹನುಮಕ್ಕನು ಸದರಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಮುಖ್ಯ ವಾರಸ್ದಾರು ಆಗಬೇಕೆಂಬ ಹಕ್ಕು ದಾರಿ ಮೇಲೆ ಚಿಕ್ಕಮಾವಹಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಶಾಮಪ್ಪನಿಗೆ ಬರತಕ್ಕ 924 ರೂಪಾಯಿಗಳನ್ನು ವಸೂಲು ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಯೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮುನಿಹನುಮಕ್ಕ ವಗ್ಯೈರೇರ ಅರ್ಜಿಯನ್ನು 1909ನೆ ಇಸವಿ ಜುಲೈ 30ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಶಾಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1908—09ನೆ ಇಸವಿ ಮಿ॥ ನಂಬರ್ 984.

ಬೆಂಗಳೂರು ಕಂಟ್ರೋಲರ್ಸ್ ಆಫೀಸಿನಲ್ಲಿ ಕ್ಲರ್ಕ್ ಆಗಿದ್ದು ಫವತಿಪಟ್ಟ ಕೃಷ್ಣರಾವು ಆಸ್ತೀ ವಿಷಯದಲ್ಲಿ—

ಅರ್ಜೀದಾರು ತರೀಕೆರೆ ತಾಲ್ಲೂಕು ಅಜ್ಜಂಪುರದ ಶ್ಯಾನುಭಾಗ ವೆಂಕಟಕೃಷ್ಣಪ್ಪನವರ ಮನೇಲಿರುವ ಲಕ್ಷ್ಮಿದೇವಮ್ಮನು ಮೃತಪಟ್ಟ ಸದರೀ ಕೃಷ್ಣರಾವ್‌ಗೆ ಮುಖ್ಯ ವಾರಸುದಾರಳು ಆಗಬೇಕೆಂಬ ಹಕ್ಕು ದಾರಿಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾವ್ ಜಿಂದಗಿ ಬಗ್ಯಾಗಿ ಬರತಕ್ಕ 739—0—0 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು ವಾರಸ್ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಿದೇವಮ್ಮನ ಅರ್ಜಿಯನ್ನು ಸ್ 1909ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1909ನೆ ಇಸವಿ ಜುಲೈ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾಮ್ಮಯ್ಯರ್,
ಸಬ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರ್ಸ್ ಆಫೀಸಿನಿಂದ.

ನೋಟಿಸ್.

ತಾರೀಖು 5ನೆ ಜುಲೈ 1909ನೆ ಇಸವಿ.

ಸಿಟಿ ಮಜಕೂರಿನಲ್ಲಿ ಇರುವ ಸಾಬೆ, ಇದ್ದಲು, ವಗ್ಯೆರೆ ಮಾರ್ಜಿನ್ನಲ್ಲಿ ಕಂಡ ಲೈಸೆನ್ಸು ಬಾಬಿನ ಅಂಗಡಿಗಳು ಇಟ್ಟಿರುವವರಿಗೆ ತಿಳಿಯಪಡಿಸುವದೇನಂದರೆ :—

1. ಸವುದೇ ಅಂಗಡಿ.
2. ಇದ್ದಲು ಅಂಗಡಿ.
3. ಬಾಣದ ಅಂಗಡಿ.
4. ಕಸಾಯಿ ಅಂಗಡಿ.
5. ಶೀಮೆ ಎಣ್ಣೆ ಅಂಗಡಿ.
6. ಕರ್ಪೂರದ ಬಟ್ಟಿ.
7. ನೀಲಿ ಕಾರ್ಖಾನೆ.

ಸ್ 1909-1910ನೆ ಸಾಲಿಗೆ ಆಯಾ ಬಾಬಿನ ಅಂಗಡಿ ಇಟ್ಟಿರತಕ್ಕವರು ಈ ಲಾಗಾಯಿತು 8 ದಿನಗಳೊಳಗಾಗಿ ಗೊತ್ತಾಗಿ ಇರುವ ಫೀಜನ್ನು ಮ್ಯುನಿಸಿಪಲ್ ಆಫೀಸಿಗೆ ಪಾವತಿಮಾಡಿ ಲೈಸೆನ್ಸು ಪಡಿಯಬೇಕು. ಫೀಜನ್ನು ವಸೂಲ್ ಮಾಡುವದಕ್ಕಾಗಿ ಅಲಾಯಿದಾ ಇಂಟಿಮೇಷ್ನ್ ನೋಟೀಸು ವಗ್ಯೆರೆ ಕೊಡುವುದಿಲ್ಲ. ಮೇಲ್ಕಂಡಂತೆ ವಾಯಿದೆ ಒಳಗೆ ಪೀಸು ಪಾವತಿಮಾಡಿ ಲೈಸೆನ್ಸು ಪಡಿಯದೆ ತಪ್ಪಿದ ದುಕಾಂದಾರನನ್ನು ಮತ್ಯಾವ ತಿಳುವಳಿಕೆಯನ್ನೂ ಕೊಡದೆ ರೂಲ್ಸು ಪ್ರಕಾರ ಪ್ರಾಸಿಕ್ಯೂಷ್ನ ಮಾಡಲ್ಪಡುತ್ತೆ.